ಸಿ.ಸಿ. ನಂ.286/24

ಸಿ.ಡಬ್ಲ್ಯೂ -22 ಪಿ.ಡಬ್ಲ್ಯೂ-10

1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.
ಸಾಕ್ಷಿಯನ್ನು ದಿನಾಂಕ 05-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ವಿಚಾರಣೆಯನ್ನು ವಿಡಿಯೋ ಕಾನ್ಫರೇನ್ಸ್ ಮೂಲಕ ಮಾಡಲಾಯಿತು.

| | |
|---|---|
| ಸಾಕ್ಷಿ ಹೆಸರು - | ಶ್ರೀನಿವಾಸ ಮೇಟಿ |
| ತಂದೆಯ ಹೆಸರು - | ಚಂದ್ರಪ್ಪ ಮೇಟಿ |
| ವಯಸ್ಸು - | 47 ವರ್ಷಗಳು |
| ಉದ್ಯೋಗ - | ಪಿ.ಐ |
| ವಾಸಸ್ಥಳ - | ಧಾರವಾಡ |

ಮುಖ್ಯ ವಿಚಾರಣೆ-ಮಾನ್ಯ ಎ. ಪಿ. ಪಿ. ಅವರಿಂದ

ನಾನು ನವೆಂಬರ್ 2022 ರಿಂದ 2024 ನೇ ಇಸವಿವರೆಗೆ ಹೊಸಪೇಟೆ ಸಂಚಾರ ಪೊಲೀಸ್ ಠಾಣೆಯಲ್ಲಿ ಪಿ.ಐ. ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 02.01.2024 ರಂದು ನಾನು ಪ್ರಕರಣದ ಕಡತವನ್ನು ಚಾಸಾ.21 ರವರಿಂದ ಸ್ವೀಕರಿಸಿ ತನಿಖೆ ಮುಂದುವರೆಸಿ, ಅದೇ ದಿನ ಚಾಸಾ.13 ರವರಿಂದ ಐ ಎಂ ವಿ ವರದಿ ಪಡೆದು, ಚಾಸಾ.9, 11, 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 09.01.2024 ರಂದು ಆರೋಪಿ ಠಾಣೆಗೆ ಹಾಜರಾಗಿದ್ದು, ಅವರ ವಿಚಾರಣೆ ಮಾಡಿ, ಅವರ ದಸ್ತಗಿರಿ ಕ್ರಮ ಅನುಸರಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ಮೋಟಾರ್ ಸೈಕಲ್ ಸಂ.ಎಂ.ಹೆಚ್-45-ಎಕೆ 2474 ನೇದ್ದರ ದಾಖಲೆಗಳನ್ನು ಪರಿಶೀಲಿಸಿ ಇಂಡೆಮಿನಿಟಿ ಬಾಂಡ್ ಪಡೆದು, ಅದರ ಮಾಲೀಕರಿಗೆ ವಾಹನ ಬಿಡುಗಡೆ ಮಾಡಿರುತ್ತೇನೆ. ದಿಃ 10.01.2024 ರಂದು ಚಾಸಾ.14 ಮತ್ತು ಚಾಸಾ.15 ರವರಿಂದ ಗಾಯಾಳುಗಳ ಗಾಯದ ಪ್ರಮಾಣ ಪತ್ರಗಳನ್ನು ಪಡೆದಿರುತ್ತೇನೆ. ದಿಃ 18.01.2024 ರಂದು ಚಾಸಾ.16 ರವರಿಂದ ಮೃತನ ಪಿ ಎಂ ವರದಿ ಪಡೆದಿರುತ್ತೇನೆ. ವಾಹನ ಸಂ.ಕೆಎ-35-ಇಬಿ-8689 ನೇದ್ದರ ಮಾಲೀಕರಾದ ನಿಂಗೇಶರವರಿಗೆ ನಾನು ವಾಹನಗಳ ದಾಖಲೆಗಳನ್ನು ಹಾಜರುಪಡಿಸಲು ನೋಟೀಸ್ ಕೊಟ್ಟಿದ್ದು, ಅದಕ್ಕೆ ಅವರು ನೀಡಿದ ಪ್ರತ್ಯುತ್ತರದಲ್ಲಿ ಈ ವಾಹನದ ವಿಮೆ ನವೀಕರಣ ಮಾಡಿಸದೇ ಇರುವುದು ಕಂಡು ಬಂತು ಹಾಗೂ ಮೃತ ಅಶ್ವೀನ್ ಕುಮಾರರವರ ಬಳಿ ಚಾಲನಾ ಪರವಾನಿಗೆ

ಇಲ್ಲದಿದ್ದರೂ ಅವರಿಗೆ ವಾಹನ ಚಲಾಯಿಸಲು ವಾಹನ ಕೊಟ್ಟಿದ್ದರಿಂದ ನಾನು ಅವರಿಗೆ ರೂ.2000.00 ದಂಡ ವಿಧಿಸಿರುತ್ತೇನೆ.

ತನಿಖೆ ಪೂರ್ಣಗೊಂಡ ಕಾರಣ ದೋಷಾರೋಪಣೆ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ.

ಸಾಕ್ಷಿ ನಿಪಿ-10 ಐ ಎಂ ವಿ ವರದಿಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-11 ರಿಂದ ನಿಪಿ-13 ಗಾಯದ ಪ್ರಮಾಣ ಪತ್ರಗಳಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅವುಗಳನ್ನು ಅನುಕ್ರಮವಾಗಿ ನಿಪಿ-11(ಎ) ರಿಂದ ನಿಪಿ-13(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-14 ಪಿ ಎಂ ವರದಿಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಂಗೇಶರವರಿಗೆ ನೀಡಿದ ನೋಟೀಸ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಅದಕ್ಕೆ ಪಡೆದ ಪ್ರತ್ಯುತ್ತರ ಹಾಗೂ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-20 ಎಂದು, ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಾರಾಯಣ ಜಾಧವರವರಿಗೆ ನೀಡಿದ ನೋಟೀಸ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-21 ಎಂದು, ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಅದಕ್ಕೆ ಪಡೆದ ಪ್ರತ್ಯುತ್ತರ ಹಾಗೂ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-22 ಎಂದು, ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು- ಆರೋಪಿತರ ಪರ ವಕೀಲರಾದ ಶ್ರೀ ಎಸ್ ಕೆ ಡಿ ಆರ್ ರವರಿಂದ-</u>

ನಾನು ಕಡತವನ್ನು ಪಡೆದ ನಂತರ ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಎಂದರೆ ಸರಿ. ನಾನು ಜಪ್ತಿ ಪಡಿಸಿಕೊಂಡ ವಾಹನಗಳನ್ನು ಖುದ್ದಾಗಿ ನೋಡಿರುತ್ತೇನೆ. ಮೃತ ಅಶ್ವಿನ್ ಕುಮಾರ ರವರ ಬಳಿ ಚಾಲನಾ ಪರವಾನಿಗೆ ಇಲ್ಲದಿದ್ದರೂ ಅವರು ವಾಹನ ಚಲಾಯಿಸಿದ್ದರಿಂದ ಈ ಅಪಘಾತ ಅವರ ನಿರ್ಲಕ್ಷ್ಯತನದಿಂದ ಆಗಿರುತ್ತದೆಯೇ ಹೊರತು ಆರೋಪಿಯ ತಪ್ಪಿನಿಂದಲ್ಲ ಎಂದರೆ ಸರಿಯಲ್ಲ. ಮೃತ ಅಶ್ವಿನ್ ಕುಮಾರ ರವರ ಬಳಿ ಚಾಲನಾ ಪರವಾನಿಗೆ ಇಲ್ಲ ಎಂಬ ಬಗ್ಗೆ ಕಡತದಲ್ಲಿ ನಮೂದು ಇದೆ.

ಸಿ.ಸಿ. ನಂ.**286/24**

ಸಿ.ಡಬ್ಲ್ಯೂ -**22** ಪಿ.ಡಬ್ಲ್ಯೂ.-**10**

ಆರೋಪಿಯೇ ಖುದ್ದಾಗಿ ಬಂದು ಮೃತ ಅಶ್ವಿನ್ ಕುಮಾರ ರವರವಿರುದ್ದ ದೂರು ಕೊಡಲು ಮುಂದಾದಾಗ ಅವರಿಗೆ ಭಾಷೆಯ ತೊಂದರೆ ಇರುವುದರಿಂದ ಅವರ ದುರನ್ನು ವಿನಾಕಾರಣ ನಾನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಈ ಅಪಘಾತದಿಂದ ತೀವ್ರ ಸ್ವರೂಪದ ಗಾಯಗಳು ಆಗಿರುತ್ತದೆ ಹಾಗೂ ಕಾಲಿನ ಮೂಳೆ ಮುರಿದಿರುತ್ತದೆ ಎಂದರೆ ಸರಿ. ಮೃತ ಅಶ್ವಿನ್ ಕುಮಾರರವರು ಹಾಗುಾ ಚಾಸಾ.1 ರವರು ಹೆಲ್ಮೆಟ್ ಧರಿಸಿದ್ದರಾ? ಎಂಬ ಬಗ್ಗೆ ನೀವು ತನಿಖೆ ನಡೆಸಿದ್ದೀರಾ ಎಂದರೆ ಸರಿ. ಆರೋಪಿಯ ತಪ್ಪಿನಿಂದ ಈ ಅಪಘಾತ ಆಗದೇ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ.9, 11, 12 ರವರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಅವರು ಯಾವುದೇ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿಯಲ್ಲ. ಮೋಟಾರ ಸೈಕಲ್ ಸಂ.ಕೆಎ-35-ಇಬಿ-8689 ವಾಹನದ ಮಾಲೀಕರಾದ ನಿಂಗೇಶರವರನ್ನು ದೋಷಾರೋಪಣೆ ಪತ್ರದಲ್ಲಿ ಸಾಕ್ಷಿಯನ್ನಾಗಿ ಮಾಡಿಲ್ಲ ಎಂದರೆ ಸರಿ. ಆ ದಿನ ಮೃತ ಅಶ್ವಿನ್ ಕುಮಾರ್ ರವರು ವಾಹನದ ಮಾಲೀಕರಿಗೆ ತಿಳಿಯದಂತೆ ವಾಹನವನ್ನು ಚಲಾಯಿಸಿದ್ದ ವಿಷಯ ಹೊರಬರಬಾರದು ಎಂಬ ಉದ್ದೇಶದಿಂದ ಈ ವಾಹನದ ಮಾಲೀಕರಾದ ನಿಂಗೇಶರವರನ್ನು ಸಾಕ್ಷಿಯನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಸಹಿ-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ,
ಹೊಸಪೇಟೆ.

ಸಾಕ್ಷಿಯ ಸಹಿ

ರಿಮೋಟ್ ಪಾಯಿಂಟ್ ಕೋ ಆರ್ಡಿನೇಟರ್ ರವರ ಸಹಿ